ಅ) ಪ್ರಸ್ತುತ ಸಾಲಿನಲ್ಲಿ ಗಾಂಧಿನಗರ ಕ್ಷೇತ್ರದಿಂದ ಪಿ.ಎಂ.ಆರ್.ವೈ. ಯೋಜನೆಯಡಿ ಸಾಲ ಸೌಲಭ್ಯ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಸಾಲ ಮಂಜೂರು ಮಾಡಿ ಹಣ ಬಿಡುಗಡೆಗಾಗಿ ಬ್ಯಾಂಕುಗಳಿಗೆ ಕಳುಹಿಸಿದ ಪ್ರಸ್ತಾವನೆಗಳ ಸಂಖ್ಯೆ ಎಷ್ಟು;

ಆ) ಬ್ಯಾಂಕುಗಳಿಗೆ ಕಳುಹಿಸಿದ ಪ್ರಸ್ತಾವನೆಗಳಲ್ಲಿ ಎಷ್ಟು ಪ್ರಸ್ತಾವನೆಗಳಲ್ಲಿ ಹಣ ಬಿಡುಗಡೆ ಮಾಡಲಾಗಿದೆ, ಉಳಿದ ಪ್ರಸ್ತಾವನೆಗಳಿಗೆ ಹಣ ಬಿಡುಗಡೆ ಮಾಡದಿರಲು ಕಾರಣವೇನು;

ಇ) ಈ ರೀತಿಯ ಯೋಜನೆಗಳಲ್ಲಿ ಬ್ಯಾಂಕುಗಳು ಬಿಡುಗಡೆ ಮಾಡದೆ ನಿರುದ್ಯೋಗಿಗಳನ್ನು ಅಲೆದಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಹಾಗಿದ್ದಲ್ಲಿ, ಈ ಫಲಾನುಭವಿಗಳಿಗೆ ಸಾಲದ ಹಣ ಬಿಡುಗಡೆ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್. ರೋಷನ್‌ಬೇಗ್ (ಕೈಗಾರಿಕೆ ಮತ್ತು ಹಜ್ ಸಚಿವರು):

ಅ) ಪ್ರಸ್ತುತ ಸಾಲಿನಲ್ಲಿ ಗಾಂಧಿನಗರ ಕ್ಷೇತ್ರದಿಂದ ಪಿ.ಎಂ.ಆರ್.ವೈ. ಯೋಜನೆಯಡಿಯಲ್ಲಿ ನಿಗದಿಪಡಿಸಿದ 93 ಗುರಿಗೆ 162 ಅರ್ಜಿಗಳು ಬಂದಿರುತ್ತವೆ. ಇವುಗಳಲ್ಲಿ ಟಾಸ್ಕ್ ಫೋರ್ಸ ಸಮಿತಿಯಿಂದ ಅರ್ಹ ಫಲಾನುಭವಿಗಳನ್ನು ಗುರುತಿಸಿ ಆಯ್ಕೆ ಮಾಡಿ 149 ಅರ್ಜಿಗಳನ್ನು ಸಾಲ ಮಂಜೂರಾತಿಗಾಗಿ ವಿವಿಧ ಬ್ಯಾಂಕುಗಳಿಗೆ ಶಿಫಾರಸ್ಸು ಮಾಡಲಾಗಿರುತ್ತದೆ.

ಆ) ಬ್ಯಾಂಕುಗಳಿಗೆ ಕಳುಹಿಸಿದ 149 ಅರ್ಜಿಗಳ ಪೈಕಿ ಇದುವರೆವಿಗೂ 29 ಫಲಾನುಭವಿಗಳಿಗೆ ಸಾಲವನ್ನು ಮಂಜೂರಾಗಿದ್ದು 9 ಫಲಾನುಭವಿಗಳಿಗೆ ಸಾಲ ಬಿಡುಗಡೆಯಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಮಂಜೂರಾತಿಗಾಗಿ ದಿನಾಂಕ 31-3-2003 ರವರೆಗೆ ಕಾಲಾವಕಾಶ ಇರುವುದರಿಂದ ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿನ ವಿವಿಧ ಬ್ಯಾಂಕುಗಳಿಗೆ ನಿಗದಿಪಡಿಸಲಾದ ಗುರಿಯಂತೆ ಅರ್ಹ ಫಲಾನುಭವಿಗಳಿಗೆ ಸಾಲ ಮಂಜೂರಾತಿಗಾಗಿ ಇಲಾಖೆಯಿಂದ ವೈಯಕ್ತಿಕ ಗಮನಹರಿಸಿ ಪ್ರಯತ್ನಿಸಲಾಗುತ್ತಿದೆ.

ಇ) ಹೌದು.

ಈ) ಇಂತಹ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸ್ಥಾಪಿತವಾಗಿರುವ ಎಲ್ಲಾ ಮಟ್ಟದ ಪಿ.ಎಂ.ಆರ್.ವೈ. ಸಮಿತಿಗಳಿಗೆ ಕಳುಹಿಸಿ ವಿಷಯವನ್ನು ಪರಿಶೀಲಿಸಿ ಹಣ ಬಿಡುಗಡೆಗೆ ಕ್ರಮ ತೆಗೆದುಕೊಳ್ಳಲು ಅನುವು ಮಾಡಿಕೊಡಲಾಗುತ್ತದೆ. ಈ ಸಮಿತಿಯು ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಅಲ್ಲದೇ ಬ್ಯಾಂಕುಗಳ ಅಸಹಕಾರದ ಬಗ್ಗೆ ಜಿಲ್ಲಾ ಮಟ್ಟದ ಬ್ಯಾಂಕರುಗಳ ಸಮಿತಿ ಸಭೆಯಲ್ಲಿಯೂ ಕೂಡ ಮಂಡಿಸಿ ಅಗ್ರಣೀಯ ಬ್ಯಾಂಕು ವ್ಯವಸ್ಥಾಪಕರುಗಳಿಗೆ ತಮ್ಮ ಅಧೀನ ಬ್ಯಾಂಕ್ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಸೂಚಿಸಲಾಗುತ್ತದೆ. ಜಿಲ್ಲೆಯ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಇವರಿಗೆ ಇಂತಹ ಮನವಿಗಳನ್ನು ಕಳುಹಿಸಿ, ನೇರವಾಗಿ ಸಂಬಂಧಪಟ್ಟ ಬ್ಯಾಂಕನ್ನು ಸಂಪರ್ಕಿಸಿ ಹಣ ಬಿಡುಗಡೆಗೆ ಪ್ರಯತ್ನಿಸಲು ಕೂಡ ಸೂಚನೆ ನೀಡಲಾಗುತ್ತಿದೆ.

ಸರ್ಕಾರಿ ರೇಷ್ಮೆ ಕಾರ್ಖಾನೆಗಳ ನಷ್ಟ

1579 (2063) ಶ್ರೀ ಗುರುಸ್ವಾಮಿ ಎ.ಎನ್. (ಚಾಮುಂಡೇಶ್ವರಿ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಸ್ವಾಮ್ಯದಲ್ಲಿ ನಡೆಸಲಾಗುತ್ತಿರುವ ಸರ್ಕಾರಿ ರೇಷ್ಮೆ ಕಾರ್ಖಾನೆಗಳಾವುವು?

ಅ) ಅವುಗಳು ಲಾಭದಲ್ಲಿ ನಡೆಯುತ್ತಿದೆಯೇ ಅಥವಾ ನಷ್ಟದಲ್ಲಿ ನಡೆಯುತ್ತಿದೆಯೇ ಲಾಭ ಮತ್ತು ನಷ್ಟದ ವರ್ಷ ಮರು (ಮೂರು ವರ್ಷ) ವಿವರ ನೀಡುವುದು ನಷ್ಟದಲ್ಲಿ ನಡೆಯುತ್ತಿದ್ದರೆ ಕಾರಣಗಳೇನು?

ಇ) ನಷ್ಟ ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಸರ್ಕಾರಿ ಸ್ವಾಮ್ಯದಲ್ಲಿ ನಡೆಸಲಾಗುತ್ತಿರುವ ಸರ್ಕಾರಿ ರೇಷ್ಮೆ ಕಾರ್ಖಾನೆಗಳು:

1. ಸರ್ಕಾರಿ ರೇಷ್ಮೆ ಕಾರ್ಖಾನೆ, ಕೊಳ್ಳೇಗಾಲ
2. ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ
3. ಸರ್ಕಾರಿ ರೇಷ್ಮೆ ಕಾರ್ಖಾನೆ, ಚಾಮರಾಜನಗರ
4. ಸರ್ಕಾರಿ ರೇಷ್ಮೆ ಕಾರ್ಖಾನೆ, ಮಾಂಬಳ್ಳಿ
5. ಸರ್ಕಾರಿ ರೇಷ್ಮೆ ಹುರಿ ಮತ್ತು ನೇಯ್ಗೆ ಕಾರ್ಖಾನೆ, ಮುಡಿಗುಂಡು

ಆ) ಜಿಲ್ಲ ಸರ್ಕಾರಿ ರೇಷ್ಮೆ ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿವೆ. ಮೂರು ವರ್ಷಗಳ ನಷ್ಟದ ವಿವರ ಕೆಳಗಿನಂತಿದೆ. (ರೂ. ಲಕ್ಷಗಳಲ್ಲಿ)

ಕ್ರ. ಸಂ.	ರೇಷ್ಮೆ ಕಾರ್ಖಾನೆ	99-2000	2000-01	2001-02
1	2	3	4	5
1.	ಕೊಳ್ಳೇಗಾಲ	88.56	146.70	130.15
2.	ಸಂತೇಮರಹಳ್ಳಿ	118.28	126.55	106.09
3.	ಚಾಮರಾಜನಗರ	115.61	94.22	102.01
4.	ಮಾಂಬಳ್ಳಿ	92.38	107.35	109.11
5.	ಮುಡಿಗುಂಡಂ	76.87	33.65	45.31

ನಷ್ಟಕ್ಕೆ ಕಾರಣಗಳು

1. ಉತ್ಪಾದನಾ ಕಾರ್ಮಿಕರು ನಿವೃತ್ತಿ ಹೊಂದಿದ ಜಾಗಕ್ಕೆ ಹೊಸದಾಗಿ ಕಾರ್ಮಿಕರ ನೇಮಕಾತಿ ಆಗಿರದೆ ಉತ್ಪಾದನೆ ಕಡಿಮೆಯಾಗಿರುವುದು.

2. ಸರ್ಕಾರಿ ರೇಷ್ಮೆ ಕಾರ್ಖಾನೆಗಳ ಕಾರ್ಮಿಕರಿಗೆ : ನೌಕರರಿಗೆ ಕಾಲಕಾಲಕ್ಕೆ ನೀಡುತ್ತಿರುವ ವೇತನ ಶ್ರೇಣಿ ಹಾಗೂ ಇತರೇ ಭತ್ಯೆಗಳನ್ನು ಟ್ರೂಸ್ ಒಪ್ಪಂದದಡಿ ವಿಸ್ತರಿಸಿಕೊಂಡು ಬಂದಿರುವುದು. ಮಹಿಳೆಯರಿಗೆ ಹೆರಿಗೆ ರಜಾ ಸೌಲಭ್ಯ ಮತ್ತು ಕಾರ್ಮಿಕರಿಗೆ ಇನ್ನಿತರೆ ಸಾಮಾನ್ಯ ರಜೆಗಳು, ಇ.ಎಸ್.ಐ. ಸೌಲಭ್ಯ, ಪಿ.ಎಫ್. ಸೌಲಭ್ಯ, ಲೇ ಆಫ್ ಘೋಷಣೆಯಾದರೆ ಅರ್ಧ ಸಂಬಳ ಪಾವತಿ ಇತ್ಯಾದಿಗಳು ಮತ್ತು ಗ್ರಾಚ್ಯುಟಿ ಪಾವತಿ, ಸ್ವಯಂ ನಿವೃತ್ತಿ ಸೌಲಭ್ಯ ವಿಸ್ತರಣೆ ಇತ್ಯಾದಿ.

3. ರೇಷ್ಮೆ ಮಾರಾಟದ ಧಾರಣೆಯು ಉತ್ಪಾದನಾ ಹೆಚ್ಚಕ್ಕಿಂತ ಕಡಿಮೆಯಿರುವುದು.

4. ಸರ್ಕಾರಿ ಬಂಡವಾಳದ ಮೇಲೆ ಶೇಕಡ 7ರಂತೆ ವಾರ್ಷಿಕ ಬಡ್ಡಿ ಹೇರಿರುವುದು.

5. ಸ್ಥಾಪನೆಯಾದಾಗಿನ ಯಂತ್ರೋಪಕರಣಗಳ ಬಳಕೆ ಹಾಗೂ ಪೂರ್ಣ ಸಮರ್ಥ್ಯದ ಯಂತ್ರೋಪಕರಣಗಳ ಬಳಕೆ ಇಲ್ಲದಿರುವುದು.

6. ಖಾಸಗಿ ರೀಲರುಗಳು ಮುಷ್ಕರ ಹೂಡಿದ್ದ ಸಂದರ್ಭಗಳಲ್ಲಿ ನೂಲು ಬಿಚ್ಚಾಣಿಕೆಗೆ ಸಾಮರ್ಥ್ಯ ಇಲ್ಲದಿದ್ದರೂ ರೇಷ್ಮೆ ಬೆಳೆಗಾರರಿಗೆ ಸಹಕರಿಸಲು ಎಲ್ಲಾ ಗೂಡನ್ನು ಖರೀದಿಸಿರುವುದು.

7. ದ್ವಿತಳಿ ಚಿತ್ತನೆ ಪ್ರದೇಶದ ಬೆಳೆಗಾರರನ್ನು ಪ್ರೋತ್ಸಾಹಿಸಲು ಬಿತ್ತನೆ ಗೂಡುಗಳು ನೂಲು ಬಿಚ್ಚಾಣಿಕೆಗೆ ಸಾಮಾನ್ಯವಾಗಿ ಯೋಗ್ಯವಲ್ಲದಿದ್ದರೂ ಬಿತ್ತನೆ ದರ ಪಾವತಿಸಿ ಬಿತ್ತನೆಗೆ ಯೋಗ್ಯವಿದ್ದು ಬೇಡಿಕೆ ಇಲ್ಲದ ಸಂದರ್ಭಗಳಲ್ಲಿ ಬಿತ್ತನೆ ಗೂಡು ಖರೀದಿಸುವುದು.

ಇ) ಎಲ್ಲಾ ಕಾರ್ಖಾನೆಗಳು ನಷ್ಟದಲ್ಲಿದೆ. ಆದುದರಿಂದ ಸರ್ಕಾರಕ್ಕೆ ಹೆಚ್ಚಿನ ಹೊರೆಯಿಲ್ಲದೆ 5 ಫಿಲೇಚರ್ ಘಟಕಗಳನ್ನು 2 ಘಟಕಗಳಿಗೆ ಒಗ್ಗೂಡಿಸಿ ಅಭಿವೃದ್ಧಿ ಸಾಧ್ಯವೇ ಎಂಬ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ರೇಷ್ಮೆ ಕಾರ್ಖಾನೆಗಳಲ್ಲಿನ ಆಡಳಿತ

1580 (2064) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ರೇಷ್ಮೆ ಕಾರ್ಖಾನೆಗಳಾದ ಮಾಂಬಳ್ಳಿ ಹಾಗೂ ಸಂತೇಮರಹಳ್ಳಿ ಕಾರ್ಖಾನೆಗಳ ಪ್ರಧಾನ ವ್ಯವಸ್ಥಾಪಕರ ಹುದ್ದೆಗಳಿಗೆ ಮೂರು ಹಂತದ ಕೆಳ ದರ್ಜೆ ನೌಕರರನ್ನು ಪ್ರಧಾನ ವ್ಯವಸ್ಥಾಪಕರಾಗಿ ಪ್ರಭಾರ ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಈ ಪ್ರಭಾರ ಪ್ರಧಾನ ವ್ಯವಸ್ಥಾಪಕರನ್ನು ಯಾವ ನಿಯಮದಡಿ ಬಹಳ ವರ್ಷಗಳಿಂದ ಪ್ರಭಾರದಲ್ಲಿ ಮುಂದುವರೆಸಲಾಗಿದೆ ಹಾಗೂ 3-4 ವರ್ಷಗಳಿಂದ ಪ್ರಭಾರದಲ್ಲಿರಿಸಿರುವುದು ನಿಯಮ ಬಾಹಿರವಲ್ಲವೆ?

ಇ) ಈ ರೀತಿ ಕೆಳದ ದರ್ಜೆ ನೌಕರರನ್ನು ಜವಾಬ್ದಾರಿಯುತ ಹುದ್ದೆಗಳಲ್ಲಿ ದೀರ್ಘಾವಧಿ ಪ್ರಭಾರದಲ್ಲಿ ಮುಂದುವರೆಸಿರುವುದು ಈ ಕಾರ್ಖಾನೆಗಳ ಆಡಳಿತ ಕಳಪೆಯಾಗಿ ಉತ್ಪಾದನೆ ಹಾಗೂ ಉತ್ಪಾದಕತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಹಾಗಿದ್ದಲ್ಲಿ ಸರ್ಕಾರವು ಸರಿಪಡಿಸಲು ತೆಗೆದುಕೊಳ್ಳುವ ಕ್ರಮಗಳಾವುವು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ : ಜವಳಿ ಸಚಿವರು):

ಅ) ಹೌದು.

ಆ) ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿನ ಪ್ರಧಾನ ವ್ಯವಸ್ಥಾಪಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ಸಿ ಅಂಡ್ ಆರ್ ಅನ್ವಯ ಭರ್ತಿ ಮಾಡಬೇಕಾಗಿದ್ದು ನಿಯಮಾನುಸಾರ ಅರ್ಹ ನೌಕರರು ಇಲ್ಲದೆ ಇರುವ ಕಾರಣ ತಕ್ಷಣದಲ್ಲಿ ಕಾರ್ಖಾನೆಯ ಆಡಳಿತ ಹಿತ ದೃಷ್ಟಿಯಿಂದ ಈ ಪ್ರಭಾರ ವ್ಯವಸ್ಥೆ ಮಾಡಿ ಮುಂದುವರೆಸಲಾಗಿದೆ.

ಇ) ಸರ್ಕಾರಿ ರೇಷ್ಮೆ ಕಾರ್ಖಾನೆಗಳ ಸಿಬ್ಬಂದಿಗೆ ಅನ್ವಯವಾಗುವ ವರ್ಕ್ ಸರ್ವೀಸ್ ರೂಲ್ಸ್ ರೀತ್ಯ ಮೇಲ್ದರ್ಜೆ ಹುದ್ದೆಗಳಲ್ಲಿ ಪ್ರಭಾರ ವ್ಯವಸ್ಥೆ ಮಾಡಲು ಅವಕಾಶವಿದ್ದು ಅದರಂತೆ ಕ್ರಮ ಕೈಗೊಂಡು ಮುಂದುವರೆಸಲಾಗಿದೆ. ಐದು ರೇಷ್ಮೆ ಕಾರ್ಖಾನೆಗಳಲ್ಲಿ ಪ್ರಧಾನ ವ್ಯವಸ್ಥಾಪಕರ ಹುದ್ದೆಗಳನ್ನು ರೇಷ್ಮೆ ಇಲಾಖೆಯ : ರೇಷ್ಮೆ ಕಾರ್ಖಾನೆಗಳ ಅಧಿಕಾರಿಗಳನ್ನು 1:5 ಅನುಪಾತದಲ್ಲಿ ತುಂಬಲು ಅವಕಾಶ ಇದ್ದು ಅದರಂತೆ ಮಾಂಬಳ್ಳಿ ರೇಷ್ಮೆ ಕಾರ್ಖಾನೆಗೆ ಇಲಾಖೆಯ ಅಧಿಕಾರಿಯನ್ನು ನಿಯೋಜಿಸಲಾಗಿದೆ.